ಸೃಜನಾಳ ಕರೆ. ಅಳುಕುತ್ತಲೇ ಫಣಿಯ ಮೆಸೇಜ್ ಕೊಟ್ಟೆ.

'ಛೇ! ನಾಳೆ ಬರಲಿ ಮಾಡ್ತೀನಿ ಅವನಿಗೆ. ಸರಿ, ನಿಮ್ಮದೇನು ಪ್ರೋಗ್ರಾಮ್?'

'ಹೇಳ್ಕೊಳ್ಳೋ ಅಂತಾದ್ದೇನಿಲ್ಲ – ನಿಮ್ಮ ಮನೆಗೆ ಬರ್ತಿನಿ ಅಂದುಕೊಂಡು ಕಸಿನ್ ಮನೆಗೆ ನಾಳೆ ಬರ್ತೀನಿ ಅಂತ ಹೇಳಿದ್ದೆ' ಸಂಕೋಚವಿತ್ತು ದನಿಯಲ್ಲಿ. 'ಹಾಗಾದರೆ ಸ್ನಾನ ಮುಗಿಸಿ ಇಲ್ಲಿಗೇ ಬನ್ನಿ, ಒಟ್ಟಿಗೆ ತಿಂಡಿ ತಿಂದರಾಯ್ತು.'

'...' ನಾನು ಕೇಳುತ್ತಿರುವುದು ನಿಜವೇ?

'ಹಲೋ, ಏನೂ ಉತ್ತರ ಇಲ್ಲ? ನಿಮ್ಮನ್ನೇನು ತಿಂದ್ಹಾಕೋಲ್ಲ ಬನ್ನಿ.'

ಆದರದ ಒತ್ತಾಯಕ್ಕೆ ಮಣಿದಿದ್ದೆ. ಲೊಕೇಶನ್ ಶೇರ್ ಮಾಡಿದ್ದಳು. ಆತಂಕದ ಛಾಯೆಯಿದ್ದರೂ ಉತ್ಸಾಹ ಮತ್ತೆ ಪುಟಿದಿತ್ತು. ಹೇಗೂ ಒಬ್ಬನೇ ಹೋಗುತ್ತಿರುವುದು, ಏನಾದರೂ ಉಡುಗೊರೆ?

ಈ ಹೊತ್ತಿಗೆ ಯಾವ ಅಂಗಡಿನೂ ತೆರೆದಿರೋಲ್ಲ. ಆಗಲೇ ನೆನಪಾದದ್ದು, 'ಶರ್ಮಿಳಗೆ ಅಂತ ಒಂದು ಸೀರೆ ತೆಗೆದಿದ್ದೀನಿ, ನೀನು ಯಾವಾಗಲಾದರೂ ಅವಳಿಗೆ ತಲುಪಿಸು' ಅಮ್ಮ ಸೀರೆ ಕೊಟ್ಟಾಗ ಸುಮ್ಮನೆ ತೆಗೆದಿಟ್ಟುಕೊಂಡಿದ್ದೆ. ಅಮ್ಮನಿಗೆ ನಮ್ಮ ಸುದ್ದಿ ತಿಳಿಯದಲ್ಲ? ಕಿಟ್‌ನಲ್ಲಿದ್ದ ಆ ಸೀರೆಯ ಪೌಚ್ ತೆರೆದೆ. ನವಿಲು ಹಸಿರು ಬಣ್ಣಕ್ಕೆ ನೀಲಿ ಅಂಚಿನ ರೇಷ್ಮೆ ಸೀರೆ. ಸೃಜನಾಳಿಗೆ ಒಪ್ಪುತ್ತೆ ಅನ್ನಿಸಿ ತೆಗೆದಿರಿಸಿಕೊಂಡೆ.

★★★

ಸೃಜನಾಳ ಮನೆ ತಲುಪುವಾಗ ಎಂಟೂವರೆ. 'ಹಾಯ್, ಬನ್ನಿ ನಂಬೋಕ್ಕಾಗ್ತಿಲ್ಲ ಯೂ ಆರ್ ಹಿಯರ್' ಹಿತವಾದ ಹಸ್ತಲಾಘವದೊಂದಿಗೆ ಸ್ವಾಗತಿಸಿದ್ದಳು. 'ಫೀಲ್ ಫ್ರೀ' ಎನ್ನುವುದನ್ನು ಮರೆಯಲಿಲ್ಲ. ಅಡುಗೆಮನೆಯಿಂದ ಸಿಹಿ ತಯಾರಿಯ ಪರಿಮಳ. 'ಇಲ್ಲಿಗೇ ಬನ್ನಿ' ಸೃಜನಾಳ ದನಿ ಕೇಳಿ ಅಲ್ಲಿಗೆ ಹೋದೆ. 'ತಿಂಡಿ ರೆಡಿ, ಇಡ್ಲಿ ಚಟ್ನಿ, ಉಡುಪಿ ಹೋಟಲಿಂದ ವಡೆ ಸಾಂಬಾರ್ ತರಿಸಿದ್ದೀನಿ, ಒಳ್ಳೆಯ ಕಾಂಬಿನೇಷನ್. ನಿಮ್ಮ ಕಾಯಿಯ ಹಲ್ವಾ ಇದ್ದೇ ಇದೆ' ನಕ್ಕಳು. 'ನಿಮ್ಮ ಅಂತೆಲ್ಲ ಬೇಡ' ಎಂದೆ. 'ಮತ್ತೆ? ಪ್ರೀತಿಯಿಂದ ಅನು ಅನ್ನಲಾ?' ಕಣ್ಣು ಮಿಟುಕಿಸಿದಳು. ಮನೆಯಲ್ಲಿ ಅನುಪಮ್, ಹೊರಗೆ ದುಬೆ. ಪುಳಕವೆನ್ನಿಸಿತು. 'ಪ್ರೀತಿಯಿಂದ? ಅಡ್ಡಿಯಿಲ್ಲ' ಎಂದೆ. ತಿಂಡಿ ಮುಗಿಸುವ ಹೊತ್ತಿಗೆ ನಮ್ಮಿಬ್ಬರ ವೈಯಕ್ತಿಕ ವಿಷಯಗಳ ಅನಾವರಣವಾಗಿತ್ತು. ಇಬ್ಬರೂ ಸೇರಿ ಅಡುಗೆ ಮಾಡಿದ್ದು ಮತ್ತೊಂದು ಮಧುರವಾದ ಅನುಭವ. ನಾನು ತೆರೆದ ಪುಸ್ತಕವಾಗಿದ್ದೆ. 'ಸುಧೀಗೆ ನನ್ನನ್ನು ಮುಟ್ಟಲೂ ಗಿಲ್ಟ್. ನನ್ನ ಸ್ಪರ್ಶಕ್ಕೆ ಅವನು ನೊಂದರೆ ಅಂತ ನನಗೂ. 'ಸೃಜಿ ನಿನ್ನ ಕಣ್ಣು ಕುಕ್ಕೋ ಸೌಂದರ್ಯ ನೋಡಿದ್ರೆ ಸಂಕಟವಾಗುತ್ತೆ, ಇನ್ನೊಂದು ಮದುವೆ ಮಾಡ್ಕೋ' ಅಂತ ಹಾರಾಡಿದ. ಫಿಸಿಕಲ್ ಇಂಟಿಮಸಿಗೋಸ್ಕರ ಮದುವೆನೇ ಆಗ್ಬೇಕಿಲ್ಲ ಅಂದ್ಬಿಟ್ಟೆ. ಬಟ್ ವೀ ಆರ್ ಗುಡ್ ಫ್ರೆಂಡ್ಸ್, ದಟ್ ಈಸ್ ಫೈನ್' ಕಣ್ತುಂಬಿಕೊಂಡಿದ್ದಳು. 'ನಾನೂ ಸಾಮಾನ್ಯ ಹೆಣ್ಣು; ಆಸೆಗಳು ನನಗೂ ಕಾಡದೇ ಏನಿಲ್ಲ. ಹೀಗೆ ಅರಳಿ ಹಾಗೆ ಕಮರುತ್ವೆ' ನಕ್ಕಳು ಕಣ್ಣೀರು ತೊಡೆಯುತ್ತ.

'ಐ ಕ್ಯಾನ್ ಫೀಲ್ ಯುವರ್ ಅಗೊನಿ' ಅವಳ ದುಃಖಕ್ಕೆ ದನಿಗೂಡಿಸಿದ್ದೆ. 'ಹಾಂ, ಮರೆಯುವ ಮೊದಲು, ನಿನಗೊಂದು ಪುಟ್ಟ ಗಿಫ್ಟ್' ಎಂದು ಸ್ಸಾರಿ ಪೌಚ್ ಕೊಟ್ಟೆ, ಅದರ ಹಿನ್ನೆಲೆಯನ್ನೂ ಹೇಳಿ. 'ಪ್ರತಿ ಸೀರೆಯ ಮೇಲೂ ಅದನ್ನು ಉಡುವವರ ಹೆಸರು ಬರೆದಿರುತ್ತದೆ, ಥ್ಯಾಂಕ್ಸ್' ಸೀರೆ ಬಿಡಿಸಿ ಎದೆಗಪ್ಪಿಕೊಂಡು, 'ನನಗೆ ಇಷ್ಟದ ಬಣ್ಣ' ಎಂದು ಭುಜ ಕುಣಿಸಿದಳು.

'ಲೆಟ್ ಮಿ ಕನ್ಫೆಸ್, ಐ ಹ್ಯಾವ್ ಸ್ಟಾರ್ಟೆಡ್ ಮಿಸ್ಸಿಂಗ್ ಯು ಸಿನ್ಸ್ ಎಸ್ಟರ್ ಡೇ' ಮನದ ಮಾತು ದನಿಯಾಗಲು ಹಿಂಜರಿಯಿತು, ಸುಮ್ಮನೆ ನಕ್ಕೆ.

★★★